# ಸುದ್ದಿ ಸಂಚಯ

## ಧರ್ಮಪುರಿಯಲ್ಲಿ ವಿವೇಕಾನಂದ ಪುರಭವನದ ಹಾಗೂ ಸ್ವಾಮಿ ರಾಮಕೃಷ್ಣಾನಂದಜೀಯವರ ಮೊದಲ ಭೇಟಿಯ ಶತಮಾನೋತ್ಸವ ಆಚರಣೆ

**ತಮಿಳುನಾಡಿನ** ಧರ್ಮಪುರಿಯ ವಿವೇಕಾನಂದ ಪುರಭವನದ ಶತಮಾನೋತ್ಸವ ನಾಗರಿಕ ಸಮಿತಿಯವರಿಂದ ಆಗಸ್ಟ್ ೨೪ ಮತ್ತು ೨೫, ೨೦೦೧ರಂದು ಶತಮಾನೋತ್ಸವ ಸಮಾರಂಭವನ್ನು ಏರ್ಪಡಿಸಲಾಗಿತ್ತು. ಬಹಳ ಸಂಖ್ಯೆಯಲ್ಲಿ ನಾಗರಿಕರು, ಭಕ್ತಾದಿಗಳು ಭಾಗವಹಿಸಿದ್ದ ಈ ಸಮಾರಂಭಕ್ಕೆ ಆಗಮಿಸಿದ್ದ ರಾಮಕೃಷ್ಣ ಮಠ ಮತ್ತು ಮಿಷನ್ನಿನ ಪೂಜ್ಯ ಸ್ವಾಮೀಜಿಗಳ ಸನ್ನಿಧಿ ಕಳೆ ಕಟ್ಟಿದಂತಿತ್ತು.

ವಿವೇಕಾನಂದ ಪುರಭವನದ ಉದ್ಘಾಟನೆ ನೂರು ವರ್ಷಗಳ ಹಿಂದೆ ೨೫.೮.೧೯೦೧ರಲ್ಲಿ ಸ್ವಾಮಿ ರಾಮಕೃಷ್ಣಾನಂದಜೀಯವರ ದಿವ್ಯ ಸನ್ನಿಧಿಯಲ್ಲಿ ನಡೆಯಿತು. ದಕ್ಷಿಣದಲ್ಲಿ ರಾಮಕೃಷ್ಣ-ವಿವೇಕಾನಂದ ವೇದಾಂತದ ಸಂದೇಶವನ್ನು ಜನಸಾಮಾನ್ಯರಿಗೆ ತಲುಪಿಸುವ ಕಾರ್ಯದಲ್ಲಿ ಕಂಕಣಬದ್ಧರಾಗಿದ್ದ ಸ್ವಾಮಿ ರಾಮಕೃಷ್ಣಾನಂದಜಿಯವರು ಸದ್ದಿಲ್ಲದ ತಾಪಸ ಜೀವನ ಮತ್ತು ಆಯಾಸವನ್ನರಿಯದ ಸೇವಾಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡದ್ದರಿಂದ ಆಗಿನ ಮದ್ರಾಸ್ ಸಂಸ್ಥಾನದ ವ್ಯಾಪ್ತಿಯಲ್ಲಿದ್ದ ಅನೇಕ ಸ್ಥಳಗಳಲ್ಲಿ ವೇದಾಂತ ಸೊಸೈಟಿಗಳು ಮೈತಳೆದವು. ಈ ಸಮಿತಿಗಳ ಹಿಂದಿನ ಪ್ರೇರಕಶಕ್ತಿಯಾಗಿದ್ದ ಸ್ವಾಮಿ ರಾಮಕೃಷ್ಣಾನಂದರ ಸ್ಫೂರ್ತಿ ಮತ್ತು ಮಾರ್ಗದರ್ಶನದಿಂದ ವೇದಾಂತದ ಕಾರ್ಯವ್ಯಾಪ್ತಿ ದಿನೇ ದಿನೇ ವಿಸ್ತಾರಗೊಳ್ಳುತ್ತಿತ್ತು. ತಮಿಳುನಾಡಿನ ಧರ್ಮಪುರಿಯಲ್ಲಿಯೂ ಸಹ ವಿವೇಕಾನಂದ ಪುರಭವನದಲ್ಲಿ ಪ್ರವಚನಗಳನ್ನು ಸ್ವಾಮಿ ರಾಮಕೃಷ್ಣಾನಂದಜಿಯವರು ೧೯೦೧ರಲ್ಲಿ ನೀಡಿದ್ದರು. ೭ ದಿನಗಳ ಅವರ ಸಾನ್ನಿಧ್ಯದಿಂದ ಪವಿತ್ರವಾದ ಈ ಭವನದಲ್ಲಿ ಸೋದರಿ ನಿವೇದಿತಾ ಹಾಗೂ ಸ್ವಾಮಿ ಅಭೇದಾನಂದಜಿಯವರು ಸಾರ್ವಜನಿಕರನ್ನು ಉದ್ದೇಶಿಸಿ ಮಾತನಾಡಿದ್ದರು. ಹೀಗಾಗಿ ಧರ್ಮಪುರಿಯ ವಿವೇಕಾನಂದ ಪುರಭವನ ಐತಿಹಾಸಿಕ ಮಹತ್ವವನ್ನು ಪಡೆದಿದೆ. ನಗರದ ಕೇಂದ್ರದಲ್ಲಿದ್ದ ಈ ಭವನದಲ್ಲಿ ವೇದಾಂತದ ಕುರಿತು ಉಪನ್ಯಾಸಗಳು, ತರಗತಿಗಳು, ಭಜನೆ ಹಾಗೂ ದೀನದಲಿತರಿಗೆ ಅನ್ನದಾನ ಮುಂತಾದ ಕಾರ್ಯಕ್ರಮಗಳಿರುತ್ತಿದ್ದವು.

ಶತಮಾನೋತ್ಸವ ಕಾರ್ಯಕ್ರಮಗಳ ಅಂಗವಾಗಿ ಭಗವಾನ್ ಶ್ರೀರಾಮಕೃಷ್ಣ, ಶ್ರೀಶಾರದಾದೇವಿ ಮತ್ತು ಸ್ವಾಮಿ ವಿವೇಕಾನಂದರ ಜೀವನಗಳ ಸಚಿತ್ರ ವಸ್ತುಪ್ರದರ್ಶನವನ್ನು ವಿವೇಕಾನಂದ ಪುರಭವನದಲ್ಲಿ ಆಯೋಜಿಸಲಾಗಿತ್ತು. ಆಗಸ್ಟ್ ೨೪ರ ಶುಕ್ರವಾರದಂದು ಸಂಜೆ ಈ ವಸ್ತುಪ್ರದರ್ಶನವನ್ನು ರಾಮಕೃಷ್ಣ ಮಠದ ಟ್ರಸ್ಟಿಗಳೂ ಹಾಗೂ ಚೆನ್ನೈ ರಾಮಕೃಷ್ಣ ಮಠದ ಅಧ್ಯಕ್ಷರೂ ಆಗಿರುವ ಪೂಜ್ಯ ಸ್ವಾಮಿ ಗೌತಮಾನಂದಜೀಯವರು ಉದ್ಘಾಟಿಸಿದರು. ಸ್ವಾಮಿ ವಿವೇಕಾನಂದರು ಪಾಶ್ಚಾತ್ಯದೇಶಗಳಿಂದ ತಾಯ್ನಾಡಿಗೆ ಮರಳಿದ ಸನ್ನಿವೇಶಗಳ ಅಭಿನಯ ಕುರಿತಿದ್ದ ಒಂದು ವೀಡಿಯೋ ಕ್ಯಾಸೆಟ್ ಕೂಡ ಈ ಸಂದರ್ಭದಲ್ಲಿ ಬಿಡುಗಡೆ ಮಾಡಿದ ಪೂಜ್ಯ ಸ್ವಾಮೀಜಿಯವರು ಮಾತನಾಡುತ್ತ ಆ ಸನ್ನಿವೇಶದ ಐತಿಹಾಸಿಕ ಮಹತ್ವವನ್ನು ತಿಳಿಸಿದರು.

ಮರುದಿನ ಶೋಭಾಯಾತ್ರೆಯನ್ನು ಆಯೋಜಿಸಲಾಗಿತ್ತು. ರಥದಲ್ಲಿ ಅಲಂಕೃತವಾಗಿದ್ದ ದಿವ್ಯತ್ರಯರ ಭಾವಚಿತ್ರಗಳಿಗೆ ಪೂಜ್ಯ ಸ್ವಾಮಿ ಗೌತಮಾನಂದಜೀಯವರು ಆರತಿಯನ್ನು ಬೆಳಗಿದರು. ಬಹು ಸಂಖ್ಯೆಯಲ್ಲಿದ್ದ ಭಕ್ತರು, ನಾದಸ್ವರದ ತಂಡ, ಶಾಲೆಯ ಹುಡುಗರು ಬ್ಯಾಂಡ್ ಸೆಟ್, ಮುಂತಾದುವುಗಳೊಡನೆ ನಡೆದ ಶೋಭಾ ಯಾತ್ರೆಯಲ್ಲಿ ಸುಮಾರು ೧೫ ಮಂದಿ ಸಾಧು ಸಂನ್ಯಾಸಿಗಳೂ ಇದ್ದರು. ಧರ್ಮಪುರಿಯ ಮುಖ್ಯಬೀದಿಗಳಲ್ಲಿ ಮುನ್ನಡೆದು ವಿವೇಕಾನಂದ ಹಾಲ್ ಮೂಲಕ ಹಾಯ್ದು ಹೋದ ಯಾತ್ರೆಯ ಕೊನೆಯಲ್ಲಿ ಮೈದಾನದಲ್ಲಿ ಸಾರ್ವಜನಿಕ ಸಭೆಯನ್ನು ಆಯೋಜಿಸಲಾಗಿತ್ತು. ಸಂಜೆ ಸಾಂಸ್ಕೃತಿಕ ಕಾರ್ಯಕ್ರಮಗಳು ಹಾಗೂ ಭಕ್ತವೃಂದದವರಿಂದ ಸಂಕೀರ್ತನೆಗಳು ಇದ್ದವು.

ಕಾರ್ಯಕ್ರಮದ ಅಂಗವಾಗಿ ರಾಮಕೃಷ್ಣ ವಿವೇಕಾನಂದ ವೇದಾಂತ ಸಾಹಿತ್ಯದ ಪುಸ್ತಕಗಳನ್ನು ವಿಶೇಷವಾಗಿ ಶೇಕಡ ೪೦ ರಿಯಾಯಿತಿಯಲ್ಲಿ ಮಾರುವ ವ್ಯವಸ್ಥೆಯನ್ನು ಈ ಉತ್ಸವದ ದಿನಗಳಲ್ಲಿ ಮಾಡಲಾಗಿತ್ತು. ❖

## ಶ್ರೀರಾಮಕೃಷ್ಣ ಸೇವಾ ಸಂಘದ ಎರಡು ದಶಕಗಳ ಸಾರ್ಥಕ ಸೇವೆ

**ಮೈಸೂರು** ರಾಮಕೃಷ್ಣ ಆಶ್ರಮದ ಆಶ್ರಯದಲ್ಲಿ ಎರಡು ದಶಕಗಳ ಹಿಂದೆ ಸ್ಥಾಪಿತವಾದ ರಾಮಕೃಷ್ಣ ಸೇವಾ ಸಂಘವು ಅಕ್ಟೋಬರ್ ೨ರಂದು ತನ್ನ ಇಪ್ಪತ್ತು ವರ್ಷಗಳ ಸೇವೆಯನ್ನು ಯಶಸ್ವಿಯಾಗಿ ನಡೆಸಿಕೊಂಡು ಬಂದ ಸ್ಮರಣಾರ್ಥವಾಗಿ ಆಶ್ರಮದ ಸಭಾಂಗಣದಲ್ಲಿ ಕಾರ್ಯಕ್ರಮವನ್ನು ಹಮ್ಮಿಕೊಂಡಿತ್ತು. ಕಳೆದ ಎರಡು ದಶಕಗಳಿಂದ ನಡೆಸಿಕೊಂಡು ಬರುತ್ತಿರುವ ಸಂಘದ ಸೇವಾಕಾರ್ಯದ ವೈವಿಧ್ಯಮಯ ಮುಖಗಳನ್ನು ತಮ್ಮ ವರದಿಯಲ್ಲಿ ಸಂಘದ ಕಾರ್ಯದರ್ಶಿಗಳು ಪರಿಚಯಿಸಿದರು. ಮೈಸೂರಿನ ರಾಮಕೃಷ್ಣನಗರ ಬಡಾವಣೆಯಲ್ಲಿ ತನ್ನದೇ ಆದ ಕಟ್ಟಡವನ್ನು ಹೊಂದಿರುವ ಸೇವಾಸಂಘವು ಅಲ್ಲಿ ವಾಸವಾಗಿರುವ ಬಡವರು ಹಾಗೂ ಮಧ್ಯಮ ವರ್ಗದ ಕುಟುಂಬಗಳಿಗೆ ಉಚಿತ ವೈದ್ಯಕೀಯ ನೆರವನ್ನು ನೀಡುತ್ತಿದೆ. ಅಷ್ಟೇ ಅಲ್ಲದೆ ನಾರಾಯಣಸೇವೆ ಹಾಗೂ ನರ್ಸರಿ ಮತ್ತು ಉಚ್ಚ ಪ್ರಾಥಮಿಕ ಶಾಲೆಯೊಂದನ್ನೂ ನಡೆಸುತ್ತಿದೆ. ಮೇಲಿನ ಕಾರ್ಯಕ್ರಮದ ಅಂಗವಾಗಿ ಅಂದು ಸಂಜೆ ಆಶ್ರಮದ ಸಭಾಂಗಣದಲ್ಲಿ ಭದ್ರಗಿರಿ ಶ್ರೀ ಅಚ್ಯುತದಾಸಜೀಯವರಿಂದ ಭಕ್ತ ಭೀಷ್ಮ ಎಂಬ ಹರಿಕಥೆಯನ್ನು ಆಯೋಜಿಸಲಾಗಿತ್ತು. ❖